2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ವಿಷಯ: ಸದನದ ಹಾಜರಾತಿಗೆ ಸಂಬಂಧಿಸಿದಂತೆ ದಿನಕ್ಕೆ ಎರಡು ಬಾರಿ ಸಹಿ ಮಾಡಬೇಕೆಂದು ತೀರ್ಮಾನಿಸಿರುವ ಬಗ್ಗೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಚಿಕ್ಕೋಡಿ): ಇವತ್ತು ನಾವು ಹೊರಗಡೆ attendanceಗೆ signature ಹಾಕಲು ಹೋದಾಗ, ಮತ್ತೆ ನೀವು ಸಂಜೆ ನಾಲ್ಕು ಗಂಟೆಗೆ ಬಂದು attendanceಗೆ ಸಹಿ ಹಾಕಬೇಕೆಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ ಇದು ಮುಖ್ಯ ಸಚೇತಕರ ಕೆಲಸ. ಶಾಸಕರು ಸದನದಲ್ಲಿ ಕಡ್ಡಾಯವಾಗಿ ಇರುವಂತೆ ಮಾಡುವ ಕೆಲಸ ಆಡಳಿತ ಪಕ್ಷದ ಮುಖ್ಯ ಸಚೇತಕರು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರ ಕೆಲಸ. ಅದನ್ನು ತಾವು ಏಕೆ ಮಾಡುತ್ತಿದ್ದೀರಿ ಎಂದು ನಮಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಇದು B.A.C.ಯಲ್ಲಿ ಆದ ತೀರ್ಮಾನ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಬೇರೆ ರಾಜ್ಯಗಳಲ್ಲಿ ಈ ರೀತಿ ಇಲ್ಲ. ನಾನು ಮಹಾರಾಷ್ಟ್ರದಲ್ಲಿ ನೋಡಿದ್ದೇನೆ.

ಅಧ್ಯಕ್ಷರು: ಇದು ನನ್ನ ತೀರ್ಮಾನವಲ್ಲ, B.A.C.ಯಲ್ಲಿ ಆದ ತೀರ್ಮಾನ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ತಾವು ಏನು ನಿರ್ಣಯ ತೆಗೆದುಕೊಂಡಿದ್ದೀರಿ, ಅದಕ್ಕೆ ನಾವು ವಿರೋಧ ಮಾಡುವುದಿಲ್ಲ, ಅದನ್ನು ನಾವು ಸ್ವಾಗತ ಮಾಡುತ್ತೇವೆ. ಅದು ಮುಖ್ಯ ಸಚೇತಕರ ಜವಾಬ್ದಾರಿ. ಶಾಸಕರು ಸದನದಲ್ಲಿರುವಂತೆ ನೋಡಿಕೊಳ್ಳುವುದು ಮತ್ತು ಮಂತ್ರಿಗಳನ್ನು ಕರೆಸುವುದು ಮುಖ್ಯ ಸಚೇತಕರ ಕೆಲಸ. ನಾನೂ ಸಹ ಮುಖ್ಯ ಸಚೇತಕನಾಗಿ ಮೂರು ವರ್ಷ ಕೆಲಸ ಮಾಡಿದ್ದೇನೆ. ಈ ರೀತಿ ಕಡ್ಡಾಯವಾಗಿ ಮಾಡುವುದು ಸರಿಯಲ್ಲ. ಅದಕ್ಕಾಗಿ ದಯವಿಟ್ಟು ತಾವು ಇದನ್ನು ಮತ್ತೊಮ್ಮೆ ಮರುಪರಿಶೀಲನೆ ಮಾಡಬೇಕು. ಏಕೆಂದರೆ, ಮಹಾರಾಷ್ಟ್ರದಲ್ಲಿ ಆ ರೀತಿಯ ಪದ್ಧತಿ ಇಲ್ಲ. ನಾನೂ ಸಹ ಮಹಾರಾಷ್ಟ್ರಕ್ಕೆ ಹೋಗಿ ನೋಡಿದ್ದೇನೆ, ಅಲ್ಲಿ attendanceಗೆ ಸಹಿಯನ್ನೇ ಮಾಡುವುದಿಲ್ಲ.

ಅಧ್ಯಕ್ಷರು : ಆಯಿತು, ಪರಿಶೀಲನೆ ಮಾಡೋಣ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ನಾವು ಸದನದಲ್ಲಿ ಇರಬೇಕು, ನಾವು ಕಲಿಯಬೇಕು, ಹೆಚ್ಚಿನ ಮಾಹಿತಿ ಸಿಗಬೇಕು ಎಂದು ನಾವು ಬರುತ್ತಿದ್ದೇವೆ. ಈ ರೀತಿ ಗುಜರಾತ್‌ನಲ್ಲಿ ಎಲ್ಲಿದೆ? ಮಹಾರಾಷ್ಟ್ರದಲ್ಲಿ ಎಲ್ಲಿದೆ?

ಶ್ರೀ ಯು.ಟಿ.ಖಾದರ್: ಇದು ಮುಖ್ಯ ಸಚೇತಕರ ಕೆಲಸವಲ್ಲ, ಇದು ಎಲ್ಲರ ಜವಾಬ್ದಾರಿ. ಎಲ್ಲ ಸದಸ್ಯರೂ ಅವರಾಗಿಯೇ ಬರಬೇಕು, ಇದಕ್ಕೆ ನಾವು ಅವಕಾಶ ಮಾಡಿಕೊಡಬಾರದು.

ಅಧ್ಯಕ್ಷರು: ಆಯಿತು, ಮರುಪರಿಶೀಲನೆ ಮಾಡೋಣ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ನೋಡಿ, ಈಗ ಇಲ್ಲಿ ಮುಖ್ಯ ಸಚೇತಕರೇ ಇಲ್ಲ. ಸಚೇತಕರನ್ನು ಏಕೆ ಮಾಡುತ್ತಾರೆ ಎಂದರೆ, ಶಾಸಕರು ಇಲ್ಲಿ ಕಡ್ಡಾಯವಾಗಿ ಇರಬೇಕು, ಅವರಿಗೆ ಫೋನ್ ಮಾಡಿ ಕರೆಸುವುದು ಮುಂತಾದ ವ್ಯವಸ್ಥೆ ಮಾಡುವುದಕ್ಕಾಗಿ ಮುಖ್ಯ ಸಚೇತಕರನ್ನು ಮಾಡಿರುತ್ತಾರೆ. ಆದರೆ ಆ ಕೆಲಸವನ್ನು ತಾವು ಏಕೆ ಮಾಡುತ್ತಿದ್ದೀರಿ, ಅಧ್ಯಕ್ಷರೆ?

ಅಧ್ಯಕ್ಷರು: ಆಯಿತು, ಮರುಪರಿಶೀಲನೆ ಮಾಡೋಣ.

ಶ್ರೀ ಡಿ.ಎನ್. ಜೀವರಾಜ್: ನಾನು ಇಲ್ಲೇ ಇದ್ದೇನೆ. ನಿಮ್ಮ ಎದುರಿಗೇ ಕುಳಿತಿದ್ದೇನೆ, ನನ್ನನ್ನೇ ಇಲ್ಲಿ ಇಲ್ಲ ಎಂದುಬಿಟ್ಟರೆ ಹೇಗೆ? ನೀವು ನಮ್ಮ ಹಿರಿಯರು, ನೀವೂ ಸಹ whip ಆಗಿದ್ದವರು. ನೀವೇ ಹೀಗೆ ಹೇಳಿದರೆ ಹೇಗೆ?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ನೀವು ನಿಮ್ಮ ಜಾಗದಲ್ಲಿ ಇರಲಿಲ್ಲ. ನೀವು ಆ ಕಡೆ, ಈ ಕಡೆ ಏಕೆ ಓಡಾಡಬೇಕು? ಏನು ಕೆಲಸವಿದೆ? ನಿಮ್ಮ ಜಾಗದಲ್ಲಿ ನೀವು ಕುಳಿತಿದ್ದರೆ ನಾವು ಏಕೆ ಹೇಳುತ್ತಿದ್ದೆವು?

ಶ್ರೀ ಡಿ.ಎನ್. ಜೀವರಾಜ್: ಏನು ಮಾಡುವುದು? ಕುಳಿತುಕೊಳ್ಳಬೇಕು ಎಂದು ಹೇಳುತ್ತೀರಿ. ಎಷ್ಟು ಹೊತ್ತು ಎಂದು ಕೂರುವುದು?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಸುಮ್ಮನೆ ನೀವು ಆ ಕಡೆ, ಈ ಕಡೆ ಹೋಗುತ್ತೀರಿ. ನಮ್ಮ ಮುಖ್ಯ ಸಚೇತಕರು ಹೇಗೆ ತಮ್ಮ ಜಾಗದಲ್ಲಿ

ಕುಳಿತಿದ್ದಾರೋ ಹಾಗೆ ನೀವೂ ಕುಳಿತುಕೊಳ್ಳಬೇಕು. ಆ ರೀತಿ ಕುಳಿತಿದ್ದರೆ ನಾವು ಏಕೆ ಹೇಳುತ್ತಿದ್ದೆವು?

ಶ್ರೀ ಡಿ.ಎನ್.ಜೀವರಾಜ್ : ಇರಲಿ, ನಿಮ್ಮಂಥ ಹಿರಿಯರ ಮಾರ್ಗದರ್ಶನವನ್ನು ಪಾಲಿಸುತ್ತೇವೆ.

3. ವರದಿಯನ್ನೊಪ್ಪಿಸುವುದು:

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು): ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಸದಸ್ಯನಾದ ನಾನು, ಸಮಿತಿಯ 119ನೇ ವರದಿಯನ್ನು ಇಂದು ದಿನಾಂಕ: 4–3–2010ರಂದು ವಿಧಾನಸಭೆಯಲ್ಲಿ ಸಮಿತಿಯ ಪರವಾಗಿ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು: ವರದಿಯನ್ನೊಪ್ಪಿಸಲಾಯಿತು. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಈಗಾಗಲೇ ನಾನು ಹೇಳಿದ ವಿಷಯಕ್ಕೆ ತಾವು ಏನೂ ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ: ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದಾರೆ.

ಅಧ್ಯಕ್ಷರು: ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಅಂದರೆ ಇವತ್ತು ಮತ್ತೆ ಸಹಿ ಹಾಕುವ ಅವಶ್ಯವಿಲ್ಲವೇ? ನಾವು ಇಲ್ಲಿ ಇರುತ್ತೇವೆ. ಆ ಪ್ರಶ್ನೆಯಲ್ಲ. ಮತ್ತೆ ಇವತ್ತು ಸಹಿ ಹಾಕಬೇಕೋ, ಬೇಡವೋ ಎಂದು ಹೇಳಿ.

ಅಧ್ಯಕ್ಷರು: ಪರಿಶೀಲನೆ ಮಾಡುತ್ತೇನೆ, ಮುಗಿಯಿತಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಅಲ್ಲಿಯವರೆಗೆ ಇಲ್ಲಿ ನಾವು ಸಹಿ ಹಾಕಬೇಕೋ, ಬೇಡವೋ ಎನ್ನುವುದನ್ನು ಹೇಳಬೇಕಲ್ಲವೇ? ಪರಿಶೀಲನೆ ಮಾಡುತ್ತೇವೆ ಎಂದು ನೀವು ಹಾಗೇ ದಬಾಯಿಸಿಕೊಳ್ಳುತ್ತಾ ಹೋದರೆ ನಾವು ಏನು ಮಾಡುವುದು?

ಶ್ರೀ ಜಗದೀಶ್ ಶೆಟ್ಟರ್: ಪ್ರಕಾಶ್ ಹುಕ್ಕೇರಿಯವರೆ, ಎರಡು ಸಲ signature ಮಾಡುವುದರಲ್ಲಿ ತಪ್ಪೇನಿದೆ? ಅದರಲ್ಲಿ ತೊಂದರೆಯೇನಿದೆ? ಹೇಗಿದ್ದರೂ ಬೆಳಗ್ಗೆ ಒಂದು ಸಲ sign ಮಾಡುವುದು ಇದ್ದೇ ಇದೆಯಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ತಾವೂ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ. ಇದರ ಬಗ್ಗೆ ನಮ್ಮದೇನೂ ತಕರಾರಿಲ್ಲ, ತಾವೂ ವಿಚಾರ ಮಾಡಿ.

ಅಧ್ಯಕ್ಷರು: ಆಯಿತು.

ಶ್ರೀ ಹೆಚ್.ಡಿ.ರೇವಣ್ಣ : ಮಾಡೋಣ ಎಂದು ಹೇಳಿದ್ದಾರೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

ವಿಷಯ: ನಿತ್ಯಾನಂದ ಸ್ವಾಮೀಜಿಯ ಲೈಂಗಿಕ ಹಗರಣದ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಿಮ್ಮ ಅನುಮತಿ ಪಡೆದು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ನಿನ್ನೆ ಬಾಲಕೃಷ್ಣರವರು ಇದನ್ನು ಪ್ರಸ್ತಾಪ ಮಾಡಿದರು. ಗೃಹ ಸಚಿವರು ಈಗ ಇಲ್ಲೇ ಇದ್ದಾರೆ. ಇವತ್ತು ಎಲ್ಲಾ ಪತ್ರಿಕೆಗಳಲ್ಲೂ ಮುಖಪುಟದಲ್ಲಿ ಬಂದಿದೆ.

ಅಧ್ಯಕ್ಷರು : ಇವತ್ತು ವರದಿ ಕೊಡುತ್ತೇವೆ ಎಂದು ಸರ್ಕಾರದವರು ನಿನ್ನೆ ಹೇಳಿದ್ದರು.

ಶ್ರೀ ಸಿದ್ದರಾಮಯ್ಯ : ನಿತ್ಯಾನಂದ ಎನ್ನುವ ಒಬ್ಬ ಸ್ವಾಮೀಜಿ, ನಿತ್ಯಾನಂದ ಎಂದು ಹೆಸರನ್ನು ಮಾತ್ರ ಚೆನ್ನಾಗಿ ಇಟ್ಟುಕೊಂಡಿದ್ದಾರೆ. ನಿತ್ಯ + ಆನಂದ = ನಿತ್ಯಾನಂದ, ಸವರ್ಣದೀರ್ಘಸಂಧಿ. ಅವನು ಹೆಸರಿಗೆ ತಕ್ಕ ಹಾಗೆ ಆನಂದವನ್ನು ಅನುಭವಿಸುತ್ತಿದ್ದಾನೆ. ಅವರ ರಾಸಲೀಲೆಗಳೆಲ್ಲಾ, ಫೋಟೋ ಸಮೇತವಾಗಿ T.V.ಗಳಲ್ಲಿ, ಪತ್ರಿಕೆಗಳಲ್ಲೆಲ್ಲ ಬಂದಿದೆ. ಅವರು ಕಾವಿ ಬಟ್ಟೆ ಹಾಕಿಕೊಂಡು ಈ ರೀತಿ ಮಾಡಿದ್ದಾರೆ. ಆ ಫೋಟೋಗಳು ಬಹಳ ಅಶ್ಲೀಲವಾಗಿವೆ, ಅಸಹ್ಯವಾಗಿವೆ. ಬಚ್ಚೇಗೌಡರೇ, ಅದನ್ನು ನೋಡಿರುವಿರೇನು?

ಶ್ರೀ ಬಿ.ಎನ್.ಬಚ್ಚೇಗೌಡ : ನಾನು ನೋಡಲಿಲ್ಲ. ನನ್ನ ಹೆಸರನ್ನು ಹೇಳಬೇಡಿ.